ಸೂಕ್ತ ಎನ್ನುವುದು ಬಹುಜನರ ಅಭಿಪ್ರಾಯವಾಗಿದೆ. ಇವೆರಡು ವಿಷಯಗಳನ್ನು ಗಮನದಲ್ಲಿಟ್ಟು ಕೊಂಡು ಸ್ಥಳೀಯ ಶಾಸಕರನ್ನು ಮತ್ತು ಸ್ಥಳೀಯ ಮುಖಂಡರುಗಳನ್ನು ಕರೆಸಿ ವಿಚಾರ ಮಾಡಿ, ಒಂದು ತಿಂಗಳೊಳಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪೂಗೌಡ ದರ್ಶನಪೂರ.—ಇದು ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಹಂತದಲ್ಲಿ ಬರುತ್ತೆ. ಮೊದಲನೇ ಹಂತದಲ್ಲಿ ಬರುವ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲ. ಇದು ವರೆಗೆ ಮುನ್ನೂರು ಎಕರೆಗೆ ಸಹ ನೀರು ಕೊಡುವುದಕ್ಕಾಗಿಲ್ಲ. ಆಲಮಟ್ಟಿ ಅಣೆಕಟ್ಟನ್ನು ಕಟ್ಟತಕ್ಕಂಥ ಕಾಲದಲ್ಲಿ ಸರ್ಕಾರದವರು ಬಾಗಲಕೋಟೆಯ ಜನತೆಯ ಮನಸ್ಸಿನ ಮೇಲೆ ಬುಷ್ಪರಿಣಾಮ ಬೀರದಂತೆ ಸ್ಪಷ್ಟವಾದ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಜೊತೆಗೆ ನಾರಾಯಣಪುರ ಅಣೆಕಟ್ಟು ಆಗತಕ್ಕಂಥ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಈ ವಿಚಾರದಲ್ಲಿ ಯಾವ ಸಂಶಯವನ್ನು ಪಡಬೇಕಾಗಿಲ್ಲ ಹಣದ ಕೊರತೆ ಇಲ್ಲ. ಮಾನ್ಯ ಬಾಪೂಗೌಡರು ಇದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ ಕೊಟ್ಟಿರತಕ್ಕಂಥ ಹಣ ಖರ್ಚಾಗಿಲ್ಲವೆಂದು ಅವರೇ ಹೇಳಿದ್ದಾರೆ. ಇದಕ್ಕೆ ನಾಲ್ಕಾರು ಕಾರಣಗಳು ಇರುವುದು ಅವರಿಗೂ ಗೊತ್ತಿದೆ. ೧೯೮೫-೮೬ ವರಗೆ ಆಲಮಟ್ಟಿ ಅಣೆಕಟ್ಟನ್ನು ಕ್ರೆಸ್ಟ್‌ಲೆವೆಲ್‌ವರೆಗೆ ಪೂರೈಸಿದರೆ ಬಾಗಲ ಕೋಟೆಗೆ ನೀರು ಬರುತ್ತದೆಂದು ತಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. ಇನ್ನು ಎರಡು ವರ್ಷದೊಳಗೆ ಬಾಗಲಕೋಟೆ ಪಟ್ಟಣವನ್ನು ಬೇರೆ ಕಡೆ ಬದಲಾಯಿಸುವುದಕ್ಕೆ ಬಾಳೇಕುಂದಿರಿಗಿ ವರದಿ ಪ್ರಕಾರ ನಿರ್ಣಯವನ್ನು ಅತ್ಯಂತ ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ. ನಿಮ್ಮನ್ನು ಕರೆಸಿ ಸಮಾಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ. ನಾರಾಯಣಪುರ ಡ್ಯಾಂ ನಿಂದ ಎಷ್ಟು ಎಕರೆಗೆ ನೀರು ಕೊಡುತ್ತೀರಾ ಎಂದು ಕೇಳಿದ್ದೀರಿ; ಇದು ತಾತ್ಕಾಲಿಕವಾದಂಥ ವಿಳಂಬ ತಪ್ಪಿ ಸೂಚನೆಯನ್ನು ಗಮನದಲ್ಲಿಟ್ಟು ಕೊಂಡು ಅತ್ಯಂತ ಚುರುಕಿನಿಂದ ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮೊದಲನೇ ಸ್ಟೇಜ್‌ನಲ್ಲಿ ೧೬೨೦ ಸಂಸಾರಗಳಿಗೆ ಪರಿಹಾರ ಕೊಡಲಿಕ್ಕೆ ತೀರ್ಮಾನ ಮಾಡಿತ್ತು. ೨ನೇ ಸ್ಟೇಜ್‌ನಲ್ಲಿ ೧೭೮೦ ಸಂಸಾರಿಗಳಿಗೆ ಪರಿಹಾರ ಕೊಡಲಿಕ್ಕೆ ತೀರ್ಮಾನ ಮಾಡಲಾಗಿತ್ತು. ಮೊದಲನೇ ಸ್ಟೇಜ್‌ನಲ್ಲೂ ಕೂಡ ೧೭೮೦ ಸಂಸಾರಗಳಿಗೆ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಪರಿಶೀಲನೆ ಮಾಡುತ್ತೇನೆ.

ಪ್ರಶ್ನೆ ೧೮೬ (೫೧)

ಉಪಾಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆಯನ್ನು ಕ್ಯಾರಿ ಓವರ್ ಮಾಡಲಾಗಿದೆ.

ಗೋಕಾಕ್ ಮತ್ತು ಕೊಣನೂರುಗಳಲ್ಲಿ ಉರುವಲು ಕಟ್ಟಿಗೆ ಅಭಾವದ ಬಗ್ಗೆ

೧೮೭. ಎಂ. ಎಲ್. ಮುತ್ತಣ್ಣವರ್ (ಗೋಕಾಕ್).— ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಗೋಕಾಕ್ ಮತ್ತು ಕೊಣ್ಣೂರು ಪಟ್ಟಣಗಳಲ್ಲಿ ಉರವಲು ಕಟ್ಟಿಗೆಯ ಪೂರೈಕೆ ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಇದಕ್ಕೆ ಕಾರಣಗಳೇನು ?

(ಇ) ಅರಣ್ಯ ಇಲಾಖೆಯವರ ನಿರ್ಲಕ್ಷದಿಂದಾಗಿ ಈ ವಿಷಯದಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿದ್ದು ಈ ಸಮಸ್ಯೆಯನ್ನು ಬಗೆಹರಿಸಲು ಕೈಗೊಳ್ಳಲು ಉದ್ದೇಶಿಸುವ ಕ್ರಮಗಳೇನು ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಗೋಕಾಕ ಮತ್ತು ಕೊಣ್ಣೂರು ಪಟ್ಟಣಗಳಲ್ಲಿ ಉರವಲು ಕಟ್ಟಿಗೆಯ ಕೊರತೆ ಇರುವುದರ ಬಗ್ಗೆ ಯಾವುದೇ ದೂರುಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

(ಅ) ಮೇಲೆ ಹೇಳಿದ ಹಾಗೆ ಯಾವ ದೂರಗಳೂ ಬರದೇ ಇರುವುದರಿಂದ ಗೋಕಾಕ್ ಮತ್ತು ಕೊಣ್ಣೂರು ಪಟ್ಟಣಗಳಲ್ಲಿ ಉರವಲು ಕಟ್ಟಿಗೆಯ ಪೂರೈಕೆ ಅಸಮರ್ಪಕ ಬಗ್ಗೆ ಯಾವ ಕಾರಣಗಳನ್ನೂ ನೀಡುವ ಪರಿಸ್ಥಿತಿ ಉದ್ಭವಿಸುವುದಿಲ್ಲ.

(ಇ) ಗೋಕಾಕ್ ಮತ್ತು ಕೊಣ್ಣೂರು ಪಟ್ಟಣಗಳಲ್ಲಿ ಉರವಲು ಕಟ್ಟಿಗೆಯ ಅಭಾವದ ಬಗ್ಗೆ ಯಾವ ದೂರುಗಳು ಸಾರ್ವಜನಿಕರಿಂದ ಬಂದಿರುವುದಿಲ್ಲ, ಒಂದು ಪಕ್ಷ ಅಭಾವ ಇದ್ದಲ್ಲಿ ಈ ಪ್ರದೇಶಗಳಲ್ಲಿನ ಯಾವುದೇ ಸಹಕಾರ ಸಂಘಗಳು ಗ್ರಾಮ ಪಂಚಾಯಿತಿಗಳು, ಸಾರ್ವಜನಿಕರ ಬಳಕೆಗೆ ಬೇಕಾಗಿರುವ ಉರವಲು ಕಟ್ಟಿಗೆಯನ್ನು ಒದಗಿಸಲು ಮುಂದೆ ಬಂದಲ್ಲಿ ಅಂತಹ ಸಂಸ್ಥೆಗಳಿಗೆ ಇಲಾಖೆಯಿಂದ ಸೌದೆಯನ್ನು ಸರಬರಾಜು ಮಾಡಲಾಗುವುದು. ಬೆಳಗಾಂ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳು ದಿನಾಂಕ ೮-೩-೧೯೮೩ ರಂದು ೫೦ ಕ್ಯೂಬಿಕ್ ಮೀಟರ್ ಉರವಲು ಸೌದೆಯನ್ನು ಗೋಕಾಕಿನ ಮಹಿಳಾ ಸಹಕಾರಿ ಸಂಘಕ್ಕೆ ಮಂಜೂರು ಮಾಡಿದ್ದರೂ ಸಹ ಅದನ್ನು ತೆಗೆದುಕೊಂಡು ಹೋಗಿಲ್ಲ. ಗೋಕಾಕಿನ ಉಪ ಸಂರಕ್ಷಣಾಧಿಕಾರಿಗಳು ದಿನಾಂಕ ೧೫-೩-೮೩ ರಂದು ಸಹಕಾರಿ ಸಂಘಕ್ಕೆ ಕಾಗದ ಬರೆದು ೩೦೭೮ ರೂಪಾಯಿಗಳನ್ನು ಪಾವತಿ ಮಾಡಿ ಸೌದೆಯನ್ನು ನಾಗನೂರಿನಿಂದ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಲು ಹೇಳಿದ್ದಾರೆ.

ಶ್ರೀ ಎಂ. ಎಲ್. ಮುತ್ತಣ್ಣವರ್.—ಮಾನ್ಯ ಮಂತ್ರಿಗಳು ಸಾರ್ವಜನಿಕರಿಂದ ದೂರು ಬಂದಿಲ್ಲ ಎಂದು ಹೇಳಿದರು. ಸಾರ್ವಜನಿಕರು ಸಾಕಷ್ಟು ಅಧಿಕಾರಿಗಳನ್ನು ಕಂಡು ಮನವಿಗಳನ್ನು ಕೊಟ್ಟಿದ್ದಾರೆ. ಗೋಕಾಕ್ ನಲ್ಲಿರತಕ್ಕ ಜನರಿಗೆ ಉರವಲು ಕಟ್ಟಿಗೆಯ ತೊಂದರೆ ಬಹಳ ಇದೆ. ಆದ್ದರಿಂದ, ಅರಣ್ಯ ಇಲಾಖೆಯ ಮುಖಾಂತರ ನಮ್ಮ ಪ್ರದೇಶಕ್ಕೆ ಉರವಲು ಕಟ್ಟಿಗೆಯನ್ನು ಹೆಚ್ಚು ಒದಗಿಸುಕೊಡುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜೀವಿಜಯ.—ಮಾನ್ಯ ಸದಸ್ಯರ ಸಲಹೆಯನ್ನು ಗಮನಿಸುತ್ತೇನೆ.

ಶ್ರೀ ಪಿ. ಎಸ್ ಕೌಜಲಗಿ.—ಎರಡು ವರ್ಷಗಳ ಹಿಂದೆ ನಾನೇ ಶಾಸಕನಾಗಿ ಸರ್ಕಾರಕ್ಕೆ ಪತ್ರವನ್ನು ಕೆದಿದ್ದೇನೆ. ಈಗ ಮಾನ್ಯ ಮಂತ್ರಿಗಳು ಮನವಿ ಬಂದಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಸುಮಾರು ೪೫ ಸಾವಿರ ಜನಸಂಖ್ಯೆ ಇರತಕ್ಕ ಪಟ್ಟಣದಲ್ಲಿ ಸೌದೆ ಉರುವಲು ಕಟ್ಟಿಗೆ ಅಭಾವ ಬಹಳ ಇದೆ. ಸರ್ಕಾರದವರು ಡಿಪೋಗಳನ್ನು ತೆಗೆದು ಉರುವಲು ಕಟ್ಟಿಗೆಯನ್ನು ಪೂರೈಕೆ ಮಾಡಬೇಕೆಂದು ಕೇಳಿದ್ದೆವು. ಈಗ ಯಾವ ಬೇಡಿಕೆಯೂ ಬಂದಿಲ್ಲ ಎಂದು ಉತ್ತರ ಹೇಳುತ್ತಿದ್ದಾರೆ. ನಾನೇ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಆದರ ಬಗ್ಗೆ ಪರಿಶೀಲನೆ ಮಾಡಿ ನಮ್ಮಲ್ಲಿ ಸರ್ಕಾರಿ ಡಿಪೋಗಳನ್ನು ತೆಗೆದು ಜನರಿಗೆ ಅನುಕೂಲ ಮಾಡಿಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೀವಿಜಯ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಎರಡು ಡಿಪೋಗಳನ್ನು ಇಟ್ಟಿದ್ದಾರೆ. ದಾವಣಗೆರೆಯಲ್ಲಿ ೩೭೦ ರೂಪಾಯಿ ಒಂದು ಟನ್‌ಗೆ ಇದೆ. ಆದೇ ಚಿತ್ರದುರ್ಗದಲ್ಲಿ ೪೦೦ ರೂಪಾಯಿ ಇದೆ. ಈ ವ್ಯತ್ಯಾಸ ಹೋಗಲಾಡಿಸಲಿಕ್ಕೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೀವಿಜಯ.—ಮಾನ್ಯ ಸದಸ್ಯರು ಮೊನ್ನೆ ಕೂಡ ಇದೇ ಪ್ರಶ್ನೆ ಕೇಳಿದ್ದರು. ಇವತ್ತು ಸೀನಿಯರೇಜ್ ರೇಟ್ ೯೮ ರೂಪಾಯಿ ಇದೆ. ಪಶ್ಚಿಮ ಘಟ್ಟದಿಂದ ಬಯಲು ಪ್ರದೇಶಕ್ಕೆ ಹೋಗ ಬೇಕಾಗಿರುವುದರಿಂದ ಟ್ರಾನ್ಸ್‌ಪೋರ್ಟ್‌ಟೇಷನ್ ಚಾರ್ಜ್ ಹೆಚ್ಚಾಗುತ್ತದೆ. ಇದರಿಂದ ಬೆಲೆ ವ್ಯತ್ಯಾಸ ಕಂಡು ಬರುತ್ತದೆ. ಅಲ್ಲದೆ ಈಗ ತಾವು ಕೇಳುತ್ತಿರುವ ಪ್ರಶ್ನೆ ಸಲ್ಲಿ ಉದ್ಭವವಾಗುವುದಿಲ್ಲ.

ಹಿರೇಮೇಗಳಗೇರಿ ಬೈಪಾಸ್ ನಾಲೆ ಕೆಲಸ ಪ್ರಾರಂಭಿಸುವ ಬಗ್ಗೆ

೧೪೮. ಶ್ರೀ ಬಿ. ಹೆಚ್. ವೆಂಕನಾಯಕ್ (ತರಪನಹಳ್ಳಿ).—ಮಾನ್ಯ ಲೋಕೋಪಯೋಗಿ ಮಂತ್ರಿ ಮಹೋದಯರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಭದ್ರಾ ಪ್ರಾಜೆಕ್ಟಿನ ದಾವಣಗೆರೆ ವಿಭಾಗದ ನಾಲೆಯಲ್ಲಿ ಬರುವ ಹಿರೇಮೇಗಳಗೇರಿ ಕೆರೆಯ ಬೈಪಾಸ್ ಕಾಲುವೆ ಮತ್ತು ಹರಪನಹಳ್ಳಿ ವಿಭಾಗದ ಪುನರ್ ನಿರ್ಮಾಣದ ಕೆಲಸ ಪ್ರಾರಂಭವಾಗಿದೆಯೆ?